ಅಗಾಧ ಪ್ರಮಾಣದಲ್ಲಿ ಶೇಖರಣೆಯಾಗಿದ್ದ ಪ್ಲಾಸ್ಟಿಕ್ಕನ್ನು ಹೊರಗೆ ತೆಗೆಯತೊಡಗಿದ. ಹೊಟ್ಟೆಯ ನಿರಂತರ ಚಲನೆಗೆ ಸಿಕ್ಕು ಪ್ಲಾಸ್ಟಿಕ್ಕು ಹಾಳೆಗಳು ವಿವಿಧ ಆಕಾರ, ಗಾತ್ರಗಳಲ್ಲಿ ಗಂಟು ಹಾಕಿಕೊಂಡಿದ್ದವು. ಕೆಲವಂತೂ ನೂರಾರು ಸಂಖ್ಯೆಯಲ್ಲಿ ಜಡೆಯಂತೆ ಹೆಣೆದುಕೊಂಡು ಅಲ್ಲಾಡಲೂ ಆಸ್ಪದವಿಲ್ಲದಷ್ಟು ದೊಡ್ಡದಾಗಿದ್ದವು. ಪ್ಲಾಸ್ಟಿಕ್ಕು ಹೊಟ್ಟೆಯ ಒಳಾಯವನ್ನೆಲ್ಲ ಆವರಿಸಿದ್ದರಿಂದ ಹಸುಗೆ ಯಾವಾಗಲೂ ಹೊಟ್ಟೆ ತುಂಬಿರುವಂತೆನಿಸುತ್ತಿತ್ತು ಮತ್ತು ಜೀರ್ಣಕ್ರಿಯೆಗೆ ಅಡಚಣೆಯಾಗಿತ್ತು. ಇದಕ್ಕೇ ಹಸು ತಿನ್ನುವುದನ್ನು ನಿಲ್ಲಿಸಿದ್ದು ಎಂದು ಡಾಕ್ಟ್ರು ವಿವರವಾಗಿ ಹೇಳಿದ. ಚಿಕ್ಕಮ್ಮ ಮತ್ತು ಮನೆಯವರೆಲ್ಲ ರೆಪ್ಪೆ ಮಿಟುಕಿಸದಂತೆ ಡಾಕ್ಟ್ರು ಮಾಡುತ್ತಿದ್ದ ಆಪರೇಷನ್ನಿನಲ್ಲಿ ಸಂಪೂರ್ಣ ಮಗ್ನರಾಗಿದ್ದರು. ಪ್ಲಾಸ್ಟಿಕ್ಕಿನ ರಾಶಿಯನ್ನು ಇಡೀ ಹಳ್ಳಿಗೆ ಹಳ್ಳಿಯೇ ಆಶ್ಚರ್ಯದಿಂದ ನೋಡುತ್ತ ನಿಂತಿತ್ತು. ತಾವು ತಿಂದೆಸೆಯುತ್ತಿದ್ದ ಪ್ಲಾಸ್ಟಿಕ್ ಕವರುಗಳು ಏನು ಅನಾಹುತ ಮಾಡಿವೆಯೆಂಬುದನ್ನು ಕಣ್ಣಾರೆ ಕಂಡರು.

'ಇಷ್ಟು ಗಲೀಜು ದೇಹ ಸೇರ್ಕಂಡ್ರೆ ಯಾವ ಜೀವ ಬದುಕುತ್ತೇಳು' ಎಂದ ಒಬ್ಬ ರೈತ. ಅವನ ಧ್ವನಿಯಲ್ಲಿ ಪಶ್ಚಾತ್ತಾಪವಿತ್ತು.

'ಮಿತಿಮೀರ್‍ರೈತಲೇ ಮನುಷ್ಯನ ಅಹಂಕಾರ! ಭೂಮ್ತಾಯಿಗಿನ್ನ ದೊಡ್ಡೋರೇನಲೇ ನಾವು? ನೋಡತನಕ ನೋಡಿ ನಮ್ಮನ್ನೆಲ್ಲ ಭೂಮ್ತಾಯಿ ಸದೆಬಡಿತಾಳೆ. ನೋಡ್ತಿರ್ರಲೇ, ನೋಡ್ತಿರ್ರಿ. ನಮ್ಮ ಅಹಂಕಾರನೇ ನಮ್ಮನ್ನ ಧ್ವಂಸ ಮಾಡುತ್ತೆ. ಇನ್ನೇನಿದ್ರೂ ಕೊಶ್ಚನ್ ಆಫ್ ಟೈಮ್' ಎಂದು ಹುಚ್ಚ ಮೂಡ್ಲಿ ಹನುಮಂತನ ಗುಡಿಯಿಂದ ಕೂಗು ಹಾಕಿದ. ಹಾಗೆ ಕೂಗಿದ್ದು ಮೂಡ್ಲಿಯೋ, ಸಾಕ್ಷಾತ್ ಹನುಮಪ್ಪನೋ ಎಂದು ಗ್ರಾಮಸ್ಥರು ಬೆಚ್ಚಿಬಿದ್ದರು. ಭಯವೆಂಬುದು ಅವರ ಬೆನ್ನುಹುರಿಗುಂಟ ಹರಿದಾಡಿತು. ಮೂಡ್ಲಿ ಸಿಟ್ಟಲ್ಲಿ ಎತ್ತಲೋ ದೇಶಾಂತರ ಹೊರಟಂತಿದ್ದ. ಗ್ರಾಮಸ್ಥರಿಗೆ ತಮ್ಮ ಮಾರ್ಗದರ್ಶಿ ಊರನ್ನು ತೊರೆದು ಹೋಗುತ್ತಿದ್ದಾನೆನಿಸಿತು. ಆದರೆ, ಅವನನ್ನು ತಡೆದು ನಿಲ್ಲಿಸಲು ಯಾರಿಗೂ ಧೈರ್ಯ ಬರಲಿಲ್ಲ.

ಮನೆಯವರೆಲ್ಲ ಕೂಲಿನಾಲಿ ಮಾಡಿ ಕೂಡಿಟ್ಟಿದ್ದ ದುಡ್ಡನ್ನೆಲ್ಲ ಗೋರಿಕೊಂಡು ಬಂದ ಚಿಕ್ಕಮ್ಮ ಡಾಕ್ಟ್ರಿಗೆ ಕೊಡುತ್ತ, 'ಹಸು ಬದುಕ್ತತ ಸಾ? ಹುಷಾರಾದ ಕೂಡ್ಲೆ ಅದನ್ನ ಮಾರಿ ಸಾಲ ತೀರುಸ್ತಿನಿ' ಅಂದಳು. ಚಿಕ್ಕಮ್ಮ ಆಕಾಶಕ್ಕೆ ಮುಖ ಮಾಡಿ, 'ನನ್ನ ಮಕ್ಳು ಮಮ್ಮಕ್ಳು ಇಂಥ ಹಲ್ಲಂಡೆಗೆ ಬೀಳ್ದಿದ್ದರೆ ಸಾಕು ದೇವ್ರೇ!' ಎಂದು ಹತ್ತೂ ದಿಕ್ಕಿಗೆ ಕೈಮುಗಿದಳು.

'ಅಯ್ಯೋ! ಇದೇ ಕಂಪ್ಲೇಂಟಿನ ಮೂರ್ನಾಲ್ಕು ಕೇಸು ಇದಾವೆ. ಅವಕ್ಕೂ ಆಪರೇಷನ್ ಮಾಡ್ಬೇಕೋ ಏನೋ? ನಾನು ಮನೆ ಸೇರೋದು ಯಾವ ಕಾಲಕ್ಕೋ?' ಎನ್ನುತ್ತ ಪಶುವೈದ್ಯ ದುಡ್ಡನ್ನು ಜೇಬಿಗೆ ಇಳಿಬಿಟ್ಟು ಅವಸರಿಸುತ್ತ ಜಾಗ ಖಾಲಿ ಮಾಡಿದ.

ಅಲ್ಲಿಯೇ ಹತ್ತಿರದಲ್ಲಿ ಚಿಕ್ಕಮ್ಮನ ಎಮ್ಮೆ ನೆರಳಿನಲ್ಲಿ ಕಣ್ಣುಮುಚ್ಚಿಕೊಂಡು ಸಾವಧಾನದಿಂದ ಮೆಲುಕು ಹಾಕುತ್ತಿತ್ತು. ಅದರ ಸುತ್ತ ಕರು ಆಡುತ್ತಿತ್ತು.


**ಡಾ. ಮಿರ್ಜಾ ಬಷೀರ್**

ತುಮಕೂರು ವಾಸಿ. 'ಬಟ್ಟೆಯಿಲ್ಲದ ಊರಿನಲ್ಲಿ', 'ಜಿನ್ನಿ', 'ಹಾರುವ ಹಕ್ಕಿ ಮತ್ತು ಇರುವೆ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಕತೆಗಳು 'ಪ್ರಜಾವಾಣಿ', 'ಸುಧಾ', 'ಮಯೂರ', 'ಹೊಸತು' ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದಾರೆ.